ಶುರುಮಾಡಿದ್ದು. ಆಮೇಲೆ ನಗೆಬರಹಗಳನ್ನು ಕೂಡ ಬರೆದೆ. 'ಸುಧಾ'ದಲ್ಲಿ ಬರುತ್ತಿದ್ದ 'ಕಾಮಧೇನು' ಕಾಲಂಗೆ ಬರೆದಿದ್ದೆ.

◆ **ಚಿಕ್ಕಂದಿನಲ್ಲಿ ಓದಿದ ಲೇಖಕರು ನಿಮ್ಮ ಮೇಲೆ ಪ್ರಭಾವ ಬೀರಿದರೆ?**

ಪ್ರಭಾವ ಬೀರಿದರು ಅಂತ ಹೇಳಕ್ಕಾಗಲ್ಲ. ಆದರೆ, ಆಗ ಓದಿದ ಬಹಳಷ್ಟು ಬರಹಗಾರರು ಇಷ್ಟವಾದರು. ನಾವೆಲ್ಲ ಚಿಕ್ಕವರಾಗಿದ್ದಾಗ ತ್ರಿವೇಣಿ, ವಾಣಿ, ಅನುಪಮಾ ಅವರೆಲ್ಲ ಬರೀತಿದ್ದ ಕಾಲ. ಅವರನ್ನೆಲ್ಲ ಓದ್ತಿದ್ದೆ. ತ್ರಿವೇಣಿ ಬರಹಗಳು ಇಷ್ಟ ಆಗೋದು. ಆ ಕಾಲಕ್ಕೆ **she was ahead of times.** ಅವರ ಕಾದಂಬರಿಯ ವಸ್ತುಗಳು ಇಷ್ಟವಾಗೋದು. ಅನಕೃ, ತರಾಸು ಅವರ ಕಾದಂಬರಿಗಳು, ಪತ್ತೆದಾರಿ ಕಾದಂಬರಿಗಳನ್ನು ಓದುತ್ತಿದ್ದೆ. ಆಮೇಲೆ ಭೈರಪ್ಪ, ಅನಂತಮೂರ್ತಿ, ಲಂಕೇಶ್ ಇವರನ್ನೆಲ್ಲ ಓದ್ತಾ ಹೋದೆ.

◆ **ಮುಂಬೈ ಬದುಕಿನ ಅನುಭವಗಳು ಬರವಣಿಗೆಯ ಮೇಲೆ ಬೀರಿದ ಪ್ರಭಾವದ ಬಗ್ಗೆ ಹೇಳಿ.**

ಮುಂಬೈ ಬದುಕಿನಿಂದ ಬಹಳ **influence** ಆದೆ. ಅದು ನನ್ನನ್ನ ಅಷ್ಟು ಪ್ರಭಾವಿಸಿತು. ತುಮಕೂರಲ್ಲಿ ಓದು ಮುಗಿಸಿ ಮದುವೆಯಾಗಿ ಮುಂಬೈಗೆ ಹೋದಾಗ ನನಗೆ 19 ವರ್ಷ. ತುಮಕೂರಂತಹ ಚಿಕ್ಕ ಊರಿಂದ ಮುಂಬೈಗೆ ಹೋದಾಗ ಆ ಊರು ನನ್ನಲ್ಲಿ ಬೆರಗು ಹುಟ್ಟಿಸಿತು. ಅಲ್ಲಿ ಓಡಾಡೋದೆಲ್ಲ ಖುಷಿನೂ ಕೊಟ್ಟಿತ್ತು. ಅಲ್ಲಿ ನನಗೆ ಸಿಕ್ಕ ಎರಡು ತರಹ **exposures** ಹೊಸ ಅನುಭವ ಲೋಕವನ್ನೇ ತೆರೆಯಿತು. ಅಲ್ಲಿನ ಮೈಸೂರು ಅಸೋಸಿಯೇಶನ್‌ನ ನಾಟಕಗಳಲ್ಲಿ ಅಭಿನಯಿಸ್ತಾ ಇದ್ದೆ. ಅಲ್ಲಿ ನಮ್ಮ ಫೈನ್ ಆರ್ಟ್ಸ್ ಗ್ರೂಪ್ ಬಹಳ ಚೆನ್ನಾಗಿತ್ತು. 'ಹಯವದನ' ನಾಟಕದಲ್ಲಿ ಪದ್ಮಿನಿ ಪಾತ್ರ ಮಾಡಿದ್ದೆ. ಮೈಸೂರು ಅಸೋಸಿಯೇಶನ್, ಕರ್ನಾಟಕ ಸಂಘ, ಕನ್ನಡ ವನಿತಾ ಸಮಾಜದ ಸುಮಾರು 40–50 ನಾಟಕಗಳಲ್ಲಿ ಅಭಿನಯಿಸಿದೆ. ಹೀಗೆ ನಾಟಕ ಮತ್ತೊಂದು ಅಂತ ಒಬ್ಬಳೇ ಓಡಾಡಲು ಶುರುಮಾಡಿದಾಗ ಹೊರಜಗತ್ತಿನ ಪರಿಚಯವಾಯಿತು. ಆಗಲೇ ಜಾಹೀರಾತು ಪ್ರಪಂಚದಲ್ಲಿ ಕೆಲಸ ಮಾಡೋಕೆ ಶುರುಮಾಡಿದೆ. ಕಾಪಿರೈಟಿಂಗ್ ಮಾಡುತ್ತಿದ್ದೆ. ಮುಂಬೈಗೆ ಹೋದಮೇಲೆ



ಎಲ್ಲೋ ನೋಡಿದ ವ್ಯಕ್ತಿ, ಚಿತ್ರಗಳು, ಎಂದೋ ನಡೆದ ಘಟನೆ, ಮಿಂಚಿ ಮರೆಯಾದ ಯಾವುದೋ ಕ್ಷಣ, ಯಾವುದೋ ಕನಸು, ಕಾಡಿದ ಭಾವ – ಹೀಗೆ ನೂರಾರು ವಿಷಯಗಳು ಬದುಕಿನುದ್ದಕ್ಕೂ ಕಾಡುತ್ತಲೇ ಇರುತ್ತವೆ. ಇವೆಲ್ಲವೂ ಮನಸಿನ ಯಾವುದೋ ಮೂಲೆಯಲ್ಲಿ ಉಳಿದು ಪ್ರತಿಮೆಗಳಾಗಿ ಬೆಳೆಯುತ್ತಿರುತ್ತವೆ. ಕತೆಯಾಗಿ ಹೊರಬರುವ ಕ್ಷಣಕ್ಕಾಗಿ ಕಾದು ಕೂತಿರುತ್ತವೆ. ಈ ಪ್ರತಿಮೆಗಳು ಬೆಳೆಯುತ್ತಾ ಕತೆಯಾಗುವ ಪರಿಯೇ ವಿಸ್ಮಯ.